ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246161, 246165

ಐ.ಎಫ್.ಟಿ.ಸಂಖ್ಯೆ/ಶಿಸಹಾಒ/ಶೇಮತಾಂ/ಆನಂದ್.ಭೇಟಿ/165/4774/ 2015–16 **ದಿನಾಂಕ: 09.10.2015**

## ಗುಜರಾತ್ ರಾಜ್ಯದ ಎನ್.ಡಿ.ಡಿ.ಬಿ ಆನಂದ್ ಪ್ರವಾಸಕ್ಕಾಗಿ ಬಸ್ ಒದಗಿಸಲು
## –: ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ :–

****

ಶಿವಮೊಗ್ಗ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯ ಹಾಲು ಉತ್ಪಾದಕರುಗಳಿಗೆ ಹಾಗೂ ಒಕ್ಕೂಟದ ವ್ಯಾಪ್ತಿಯ ಸಂಘಗಳ ಕಾರ್ಯದರ್ಶಿಗಳಿಗೆ ಹೆಚ್ಚಿನ ಜ್ಞಾನರ್ಜನೆಗಾಗಿ ಗುಜರಾತ್ ರಾಜ್ಯದ ಎನ್.ಡಿ.ಡಿ.ಬಿ. ಆನಂದ್ ಹಾಗೂ ಅಲ್ಲಿನ ಸಂಘಗಳಿಗೆ ಒಟ್ಟು 7 ದಿನಗಳ ಅಧ್ಯಯನ ಪ್ರವಾಸ ಏರ್ಪಡಿಸಲಾಗಿದೆ. ಸಂಘಗಳ ಅಧ್ಯಕ್ಷರುಗಳ ತರಭೇತಿ ಅವಧಿಯು ದಿನಾಂಕ : 02.11.2015 ರಿಂದ 03.11.2015, 26.11.2015 ರಿಂದ 27.11.2015 ಮತ್ತು 03.12.2015 ರಿಂದ 04.12.2015 ರವರೆಗೆ ಇದ್ದು, ತರಭೇತಿ ಅವಧಿಯು 2 ದಿನಗಳು ಸೇರಿಸಿ ಈ ಪ್ರವಾಸದ ಅವಧಿಯು 7 ದಿನ ಆಗಿರುತ್ತದೆ. ತರಭೇತಿ ಅವಧಿಯಲ್ಲಿ ಎನ್.ಡಿ.ಡಿ.ಬಿ ಆನಂದ್‌ನಲ್ಲಿ ಊಟ ವಸತಿ ವ್ಯವಸ್ಥೆ ಇರುತ್ತದೆ. ಸಂಘದ ಅಧ್ಯಕ್ಷರುಗಳ 3 ತಂಡ ಮತ್ತು ಕಾರ್ಯದರ್ಶಿಗಳ 6 ತಂಡಗಳಿಗೆ ಶಿವಮೊಗ್ಗ/ದಾವಣಗೆರೆಯಿಂದ ಗುಜರಾತ್ ರಾಜ್ಯದ ಡೈರಿ ಉದ್ಯಮದ ಅಮೂಲ್ ಪ್ರವಾಸ/ತರಭೇತಿ ಕಾರ್ಯಕ್ರಮಕ್ಕೆ ಹೋಗಿ ಆನಂದ್‌ನಿಂದ ಶಿವಮೊಗ್ಗ/ದಾವಣಗೆರೆ ವಾಪಸ್ಸು ಆಗುವುದು.

ಪ್ರತಿ ತಂಡದ 47 ಸದಸ್ಯರ ಅಧ್ಯಯನ/ತರಭೇತಿ ಕಾರ್ಯಕ್ರಮದ 7 ದಿನದ ಪ್ರಯಾಣ ಅವಧಿಯಲ್ಲಿ ಪ್ರಯಾಣದ ವೆಚ್ಚ, ವಸತಿ, ಉಪಹಾರ ಊಟದ ವ್ಯವಸ್ಥೆ, ಹಾಗೂ ಮಾರ್ಗದಲ್ಲಿ ಬರುವ ಪ್ರೇಕ್ಷಣಿಯ ಸ್ಥಳಗಳ ಭೇಟಿಗಾಗಿ 47 ಸೀಟಿನ ಸುಖಾಸಿನ/ಅದಕ್ಕೆ ಸಮನಾದ ಬಸ್‌ನಲ್ಲಿ ಕರೆದುಕೊಂಡು ಹೋಗಿ ಬರಲು ಪ್ಯಾಕೇಜ್ ಟೂರ್ ಸೌಲಭ್ಯ ಒದಗಿಸಲು ಟೆಂಡರ್ ಕರೆಯಲಾಗಿದೆ.

ತರಭೇತಿ ಕಾರ್ಯಕ್ರಮಕ್ಕೆ ಮತ್ತು ಅಧ್ಯಯನ ಪ್ರವಾಸಕ್ಕೆ ತಲಾ ಅಭ್ಯರ್ಥಿಗೆ ತಗುಲುವ ಕನಿಷ್ಠ ದರವನ್ನು ಪ್ರತ್ಯೇಕವಾಗಿ ನಮೂದಿಸಬೇಕಾಗಿರುತ್ತದೆ. ಟೆಂಡರ್ ಸಲ್ಲಿಸಬಯಸುವವರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ರೂ. 25,000/– ಇ.ಎಂ.ಡಿ.ಯೊಂದಿಗೆ** ಅರ್ಜಿ ಸಲ್ಲಿಸಬಹುದು. **ಪ್ರವಾಸದ ವಿವರವನ್ನು ಒಕ್ಕೂಟದ ವೆಬ್‌ಸೈಟ್‌ನಲ್ಲಿ ಪಡೆಯಬಹುದು.**

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 13.10.2015 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | **ದಿನಾಂಕ: 21.10.2015 ರಂದು ಸಂಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: **26.10.2015** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ / ದರ ಸಂಧಾನ ದಿನ** | ದಿನಾಂಕ: **28.10.2015** ರಂದು ಬೆಳಿಗ್ಗೆ: **11.30** ಗಂಟೆಗೆ |

1. ಟೆಂಡರ್ ಸಲ್ಲಿಸ ಬಯಸುವ ವಾಹನ ಮಾಲೀಕರು/ಟೂರಿಸ್ಟ್ ಏಜೆನ್ಸಿಗಳು/ಸಾರಿಗೆ ಏಜೆನ್ಸಿಗಳು ಕಡ್ಡಾಯವಾಗಿ ವಾಹನವನ್ನು ತಮ್ಮ ಹೆಸರಿನಲ್ಲಿ ಅಥವಾ ಏಜೆನ್ಸಿ ಹೆಸರಿನಲ್ಲಿ ಹೊಂದಿರತಕ್ಕದ್ದು. ಮತ್ತು ಎಲ್ಲಾ ವಾಹನ ದಾಖಲಾತಿಗಳನ್ನು ಪಾನ್‌ಕಾರ್ಡ್‌ನೊಂದಿಗೆ ಕಡ್ಡಾಯವಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.
2. ಹೊರ ರಾಜ್ಯ ಪ್ರವಾಸಕ್ಕೆ ಅಂತರ ರಾಜ್ಯ ಪರ್ಮಿಟ್ ಮತ್ತು ತೆರಿಗೆ, ಟೋಲ್ ಫೀ, ಪಾರ್ಕಿಂಗ್ ಶುಲ್ಕ ಮುಂತಾದವುಗಳನ್ನು ಪ್ರವಾಸ ಸಂಸ್ಥೆಯವರೇ ಭರಿಸುವುದು. ಯಾವುದೇ Halting charge, ಡ್ರೈವರ್ ಬಾಟ ನೀಡಲಾಗುವುದಿಲ್ಲ.
3. ಹೊರ ರಾಜ್ಯ ಪ್ರವಾಸಕ್ಕೆ ಟೆಂಡರ್ ಹಾಕ ಬಯಸುವ ಬಸ್ಸ್ ಮಾಲೀಕರು ಉಪಹಾರ, ಊಟ, ಕಾಫಿ, ಟೀ ಮತ್ತು ವಸತಿ ಸೇರಿ **ಪ್ರತಿ ಪ್ರವಾಸಿಗೆ ಆಗುವ ವೆಚ್ಚವನ್ನು ಗಣನೆಗೆ ತೆಗೆದುಕೊಂಡು ತೆರಿಗೆ ಸಹಿತ ಕನಿಷ್ಠ ದರ ನಮೂದಿಸಿವುದು.**

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ www.shimul.coop ಸಂಪರ್ಕಿಸಬಹುದು.**

ದಿನಾಂಕ : 09.10.2015
ಸ್ಥಳ : ಶಿವಮೊಗ್ಗ

**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ